# ಅಂತರಂಗ

■ ತೆಲುಗು ಮೂಲ: **ಅರುಣ ಪಪ್ಪು**

■ ಕನ್ನಡಕ್ಕೆ: **ಮ.ಸು. ಸುಲೋಚನ**

**ಪ್ರೀತಿಯ ಅಮ್ಮ,**

ನೀನು ನನ್ನ ಮದುವೆಗಾಗಿ ಸಂಬಂಧಗಳನ್ನು ನೋಡಬೇಡ, ನಾನು ನೀನು ನೋಡಿದ ಹುಡುಗಿಯನ್ನು ಮದುವೆಯಾಗುವುದಿಲ್ಲ. ನಾನು ಪಾವನಿಯನ್ನು ಪ್ರೀತಿಸುತ್ತಿರುವೆನೆಂದು ನೀನು ಭಾವಿಸಿರುವೆ. ಆದರೆ ಅದು ನಿಜವಲ್ಲ. ನಾವು ಪ್ರೇಮಿಗಳಲ್ಲ; ಒಳ್ಳೆಯ ಸ್ನೇಹಿತರು.

ಈಗ ನಿನಗೆ ಎಲ್ಲಾ ತಿಳಿಯಬೇಕು, ನಾನು ಹೇಳುತ್ತೇನೆ. ನೀನು ಇದನ್ನು ಹೇಗೆ ತೆಗೆದುಕೊಳ್ಳುತೀಯಾ ನನಗೆ ತಿಳಿಯದು. ನಾನು ನಿನಗೆ ಈ ವಿಷಯವನ್ನು ಹೇಳಬೇಕೆಂದು ಎಷ್ಟೋ ವರ್ಷಗಳಿಂದ ಪ್ರಯತ್ನಿಸುತ್ತಿದ್ದೇನೆ.

ಅಮ್ಮ, ನಾನು ತುಂಬಾ ಚಿಕ್ಕವನಿದ್ದಾಗ ಅಪ್ಪ ನನ್ನನ್ನು ಗಾಳಿಯಲ್ಲಿ ಮೆಲಕ್ಕೆಸೆದು ಹಿಡಿದುಕೊಳ್ಳುತ್ತಿದ್ದರಲ್ಲವೇ....! ಆಗ ನೀನು ತೆಗೆದ ಫೋಟೊ ಈಗಲೂ ನಮ್ಮ ಮನೆಯಲ್ಲಿ ಟೀವಿ ಪಕ್ಕದಲ್ಲಿ ಇದೆ ನೋಡು. ಅಪ್ಪನ ಕೈಯಲ್ಲಿ ಅಲ್ಲದೆ ಮೇಲೆ ಗಾಳಿಯಲ್ಲಿದ್ದರೂ ನಾನು ಆ ಫೋಟೊದಲ್ಲಿ ನಗುತ್ತಲೇ ಇದ್ದೇನೆ.

ಚಿಕ್ಕಂದಿನಲ್ಲಿ ನಾನು ಸ್ವಲ್ಪ ದಿನ ಏನೆಂದುಕೊಳ್ಳುತ್ತಿದ್ದೆನೆಂದರೆ ನಮ್ಮಪ್ಪ ಹೀರೋ ಎಂದು. ಏಕೆಂದರೆ ಚಿಕ್ಕ ಹುಡುಗನನ್ನು ಗಾಳಿಯಲ್ಲಿ ಹಾರಿಸಲು ಎಷ್ಟು ಧೈರ್ಯವಿರಬೇಕು? ಮತ್ತೆ ಕೆಳಗೆ ಬೀಳದಂತೆ ಹಿಡಿದುಕೊಳ್ಳುವುದೆಂದರೆ ಎಷ್ಟು ಸಾಹಸದ ಕೆಲಸ? ಅನಂತರ ಕೆಲವು ದಿನ ಏನೆಂದುಕೊಳ್ಳುತ್ತಿದ್ದೆನೆಂದರೆ ಗಾಳಿಯಲ್ಲಿ ಮೇಲಕ್ಕೆ ಎಸೆದಿದ್ದರೂ ಕೆಳಕ್ಕೆ ಬೀಳದೆ ಯಾವ ಆಧಾರವಿಲ್ಲದಿದ್ದರೂ ಹಾಗೆ ಬೊಚ್ಚು ಬಾಯಿ ತೆಗೆದು ನಗುತ್ತಿದ್ದೆನೆಂದರೆ ನಾನು ಹೀರೋನೆ ಅಲ್ವೇನಮ್ಮ? ನಾನು ಹೇಗೆಲ್ಲ ಯೋಚನೆ ಮಾಡುತ್ತಿದ್ದೆನೆಂದು ನಿನಗೆ ತಿಳಿಯದು. ಈಗ ನೆನೆಸಿಕೊಂಡರೆ ನಗು ಬರುತ್ತಿದೆ ಅಲ್ವ. ನಗಮ್ಮ ನೀನು ನಕ್ಕರೆ ತುಂಬಾ ಚೆನ್ನಾಗಿ ಕಾಣಿಸುತ್ತೀಯ.

ಆದರೆ ಈಗ ಮೂವತ್ತು ವರ್ಷ ವಯಸ್ಸಿನವನಾದ ನಂತರ ಆ ಫೋಟೊ ನೋಡಿದರೆ ಏನನಿಸುತ್ತಿದೆ ಗೊತ್ತೇ? ನನ್ನ ನಗುವಿನಲ್ಲಿಯೂ, ಅಪ್ಪನ ನಗುವಿನಲ್ಲಿಯೂ, ಫೋಟೊ ತೆಗೆಯುತ್ತಿದ್ದ ನಿನ್ನಲ್ಲಿಯೂ ಇದ್ದುದೊಂದೇ; ಅದು ಧೈರ್ಯ. ಬಿದ್ದರೆ ಅಪ್ಪ ಹಿಡಿದುಕೊಳ್ತಾರೆ ಬಿಡು ಎಂಬ ಧೈರ್ಯ ನನ್ನಲ್ಲಿಯೂ, ಹಿಡಿದುಕೊಳ್ಳುವೆನೆಂಬ ಕಾನ್ಫಿಡೆನ್ಸ್ ಹಾರಿಸಿದ ಅಪ್ಪನಲ್ಲಿಯೂ ಮತ್ತು ಅವರು ತಮ್ಮ ಮಗನನ್ನು ಬೀಳಿಸುವುದಿಲ್ಲವೆಂಬ ಅಪಾರ ನಂಬಿಕೆ ನಿನ್ನಲ್ಲಿಯೂ.. ಒಟ್ಟಿನಲ್ಲಿ ನಾವು ಮೂವರು ಒಂದು ಎಂಬ ಭಾವನೆ ಅಚ್ಚೊತ್ತಿದಂತಿದೆ.

ಆ ನಂಬಿಕೆ, ಆ ಧೈರ್ಯ ಹೋಗಿ ನನ್ನಲ್ಲಿ ಯಾವಾಗ ಅಧೈರ್ಯ, ಅಪನಂಬಿಕೆ ಮನೆ ಮಾಡಿಕೊಂಡಿತೋ ತಿಳಿಯಲಿಲ್ಲಮ್ಮ, ಅಂದರೆ ನನಗೆ ನಿಜವಾಗಿಯೂ ತಿಳಿಯಲಿಲ್ಲವೆಂದಲ್ಲ, ನನಗೆ ಭಯವಾದ ಆ ಮೊದಲ ದಿನ ನಿನ್ನ ಬಳಿಯೇ ಓಡಿ ಬಂದೆನಮ್ಮ...ಮೊದಲನೆಯ ದಿನ...

ನಮ್ಮ ಚಿಕ್ಕ ಮಾವ ಇದಾನಲ್ಲ ... ಅದೇ ನಮ್ಮ ಚಿಕ್ಕ ಚಿಕ್ಕಮ್ಮನ ತಮ್ಮ ಅವನಿಗೆ ಚಿಕ್ಕ ಮಕ್ಕಳು ಎಂದರೆ ತುಂಬಾ ಮುದ್ದು ಎಂದು ಹೇಳುತ್ತಿದ್ದರು. ನಾವೆಲ್ಲ ಒಟ್ಟಾಗಿ ಇರುತ್ತಿದ್ದ ಆ ದಿನಗಳಲ್ಲಿ, ನನಗೆ ಆಗ ಐದು ವರ್ಷ ಇರಬಹುದುದೇನೋ.. ಪುಟ್ಟ ತಂಗಿಯ ಲಾಲನೆ ಪಾಲನೆಯಲ್ಲಿ ನಿನಗೆ ಸಮಯವಿಲ್ಲವೆಂದು... ನನ್ನನ್ನು ಅವನೊಂದಿಗೆ ಸ್ನಾನಕ್ಕೆ ಕಳುಹಿಸುತ್ತಿದ್ದೆ.

ಆಗ ಅವನು ಏನು ಮಾಡುತ್ತಿದ್ದ ಗೊತ್ತೇ ಅಮ್ಮ? ತುಂಬಾ ಕೆಟ್ಟದಾಗಿ ನನ್ನ ಶರೀರವನ್ನು ಮುಟ್ಟುತ್ತಿದ್ದ ಅಮ್ಮ, ಅಲ್ಲಿ ಇಲ್ಲಿ ಎಲ್ಲೆಲ್ಲೋ ಕೈಹಾಕಿ ತಿರುಚಿ ಬಿಡುತ್ತಿದ್ದ ಅಮ್ಮ ,ಬಾತ್ ರೂಂ ನಲ್ಲಿ ತಾನು ಬಟ್ಟೆಯನ್ನು ತೆಗೆದು ನನ್ನನ್ನು ನೋಡು ಎನ್ನುತ್ತಿದ್ದ, ಏನೇನೊ ಗೊಣಗಿಕೊಳ್ಳುತ್ತಾ ನನ್ನನ್ನು ಹಿಂಡಿ ಬಿಡುತ್ತಿದ್ದ, ನಾನು ಕೆಂಪಗಾಗಿ ಬಿಡುತ್ತಿದ್ದೆ.

ಬಚ್ಚಲು ಮನೆಯಿಂದ ಹೊರಗೆ ಬಂದು 'ನೋಡಕ್ಕಾ ನಿನ್ನ ಮಗ ಬಿಸಿ ನೀರಿಗೆ ಹೇಗೆ ಕೆಂಪು

